ಹಾರುವೆ ಮಡಿಯೆಲ್ಲ ಬಂತೇ ಬಿಕನಾಸಿ'' ಎಂದು ಚಾಟಿ ಬೀಸಿರಬಹುದು.

ಇನ್ನು ಈ ಮಡಿಕೋಲು ಯಾರಿಗಾದರೂ ಅಡ್ಡ ಹೆಸರಿಡಲೂ ಉಪಮೆಯಾಗಿ ಒದಗಿ ಬರ್ತಾ ಇತ್ತು. ಕೀಟಲೆ, ವಿನೋದಗಳಿಗೆ ಹೆಸರಾಗಿದ್ದ ಡಿ.ವಿ.ಜಿ.ಯವರ ಯಾವ ಒಂದು ಚಾಟುಪದ್ಯ(ಸಲುಗೆ, ಗೌರವ ಬೆರೆತ ಕೀಟಲೆಯ ಪದ್ಯ ಎನ್ನಿ ಬೇಕಾದರೆ)ವನ್ನು ಓದಿ, ನನಗೆ ಮಡಿಕೋಲಿನ ಗತವೈಭವ ನೆನಪಿಗೆ ಬಂದು ಈ ಲೇಖನ ಹುಟ್ಟಿತೋ, ಆ ಪದ್ಯವು ಗುಂಡಪ್ಪನವರ ಮಿತ್ರರೂ ವಿದ್ವಾಂಸರೂ, ಕಾವ್ಯಗಳನ್ನು ಬರೆದವರೂ ಆಗಿದ್ದ ಶ್ರೀ ಕೊಮಾಂಡೂರ್ ರಾಮಸ್ವಾಮಿ ಅಯ್ಯಂಗಾರ್ಯರ್ ಎಂಬ ಒಬ್ಬರು ಸಜ್ಜನರನ್ನು ವರ್ಣಿಸಿ ಬರೆದದ್ದೇ ಆಗಿದೆ. ಅದರಲ್ಲಿ ತೆಳ್ಳಗೆ ಎತ್ತರಕ್ಕೆ ಕಡ್ಡಿ ಕಡ್ಡಿಯಾಗಿದ್ದ ರಾಮಸ್ವಾಮಿಗಳನ್ನು ಮಡಿಕೋಲಿಗೆ ಒಪ್ಪಿಡುತ್ತಾ "ಪೋಗಿ ನೋಡುವುದಲ್ಲಿ ನಗು ಮೊಗವುಳ್ಳ ಮಡಿಕೋಲನ್'' ಎಂದು ಪದ್ಯವನ್ನು ಮುಗಿಸಿದ್ದಾರೆ. ಅಲ್ಲಿಗೆ ಅಂತಂಥ ದೊಡ್ಡವರೇ ಸಣಕಲ ಕಡ್ಡಿಗಳಿಗೆ ಒಳ್ಳೆ ಮಡಿಕೋಲಿದ್ದ ಹಾಗೆ ಅನ್ನೋ ಉಪನಾಮ ಕೊಡೋದು ವಾಡಿಕೆಗೆ ತಂದು ನಮಗೆಲ್ಲಾ ದಾರಿತೋರಿದ್ದು ಅಂತಾಯ್ತು. ನಾವೂ ಬೇಕಾದಷ್ಟು ಜನರಿಗೆ ಈ ಉಪಮೆಯನ್ನು ಬಳಸಿ, ಪರಂಪರೆಯ ಋಣ ತೀರಿಸಿದ್ದೀವಿ ಬಿಡಿ. ಹಿಂದೆ ಮುಂದೆ ಎಲ್ಲಿಂದ ಹೇಗೆ ನೋಡಿದರೂ ಹೆಣ್ಣಿನ ಲಕ್ಷಣಗಳೇ ಇಲ್ಲದ ಹೆಂಗಸರಿಗೂ ಈ ಅಡ್ಡ ಹೆಸರು ತಪ್ಪುತ್ತಿರಲಿಲ್ಲ. ಪಾಪ ಅವರು ಎಷ್ಟು ಒಳ್ಳೆಯ ಸೀರೆ ಉಟ್ಟು ಬರಲಿ ಅವರನ್ನು ಹಿಂದಿನಿಂದ, "ಒಳ್ಳೆ ಮಡಿಕೋಲಿಗೆ ಸೀರೆ ಉಡಿಸಿದ ಹಾಗಿದೆ'' ಅಂತಾ ಮೂತಿ ತಿರುವೋದು, ಕೀಟಲೆ ಮಾಡೋದು, ಆಡಿಕೊಳ್ಳೋದು ಎಲ್ಲಾ ಇತ್ತು. ಹೀಗೆ ಒಬ್ಬಾಕೆಯನ್ನು ಆಡಿಕೊಳ್ಳುವಾಗ ಗಂಡಸರ, ಪಡ್ಡೆ ಹೈಕಳ ದೃಷ್ಟಿ ಬೇರೆ. ಹೆಂಗಸರ ದೃಷ್ಟಿ ಬೇರೆಯೇ ಆಗಿರ್ತಿತ್ತು ಎನ್ನಬಹುದು. ಎಷ್ಟೋ ಬಾರಿ ಸೌಂದರ್ಯ ಕೊಟ್ಟ ದೇವರು ನಮಗೆ ಒಳ್ಳೆ ಸೀರೆಯ ಭಾಗ್ಯ ಕರುಣಿಸದೇ, ಆ ಮಡಿಕೋಲಿಗೆ ಕರುಣಿಸಿ ಬಿಟ್ಟಿದ್ದಾನಲ್ಲ ಎನ್ನುವ ಅಸೂಯೆಯೇ ಹೆಂಗಸರ ಆಡಿಕೊಳ್ಳುವಿಕೆ, ಸೊಟೆ ತಿರುವುವುದರಲ್ಲಿ ಮುಖ್ಯವಾಗಿರ್ತಿತ್ತೇನೋ. ಈಗ ಅವೆಲ್ಲಾ ಹೇಳಕ್ಕಾಗಲ್ಲ. ಈಗೆಲ್ಲಾ ಪೆನ್ಸಿಲ್ ತರಹ ಇರೋ ಸಪೂರ ಸುಂದರಿಯರಿಗೇ ಡಿಮ್ಯಾಂಡು. ಮತ್ತು ಅವರೆಲ್ಲಾ ಸೀರೆ ಉಡೋದು ಕಡಿಮೆ. ಮಡಿಕೋಲನ್ನಂತು ಅವರ್‍ಯಾರೂ ಕಂಡಿಲ್ಲ. ಹಾಗಾಗಿ, ಆ ಉಪಮಾನ, ಉಪಮೇಯಗಳಿಗೆಲ್ಲಾ ಕೆಲಸವಿಲ್ಲ ಬಿಡಿ. ಒಂಥರಾ ಜೋಡುನುಡಿಯಂತೆ ಬಳಕೆಯಲ್ಲಿರುವ "ಮಡಿಹುಡಿ'' ಶಬ್ದ ಮಡಿಯ ಭವಿಷ್ಯವನ್ನೇ ಹೇಳಲು ಸೃಷ್ಟಿಯಾದದ್ದೇನೋ. ಏಕೆಂದರೆ, ಈಗ ಮಡಿಯೆಲ್ಲಾ ಹುಡಿ ಹುಡಿ. ಮಡಿಯೂ ಇಲ್ಲ, ಮಡಿಕೋಲು ಇಲ್ಲ. ಆದರೂ ಮಡಿಕೋಲನ್ನು ಕಂಡವರಿಗೆ ಅಪರೂಪಕ್ಕಾದರೂ ನೆನಪಾಗುವುದು ತಪ್ಪಿಲ್ಲ.

**ಶಾಂತಾ ನಾಗಮಂಗಲ**

ಕನ್ನಡ, ಹಿಂದಿ, ಸಂಸ್ಕೃತಗಳಲ್ಲಿ ಎಂ.ಎ. ಅವರ 'ಕೀರ್ತನಕಲೆ ಮತ್ತು ಗಮಕ ಕಲೆ – ಒಂದು ತೌಲನಿಕ ಅಧ್ಯಯನ' ಎಂಬ ಫೆಲೋಶಿಪ್ ಪ್ರಬಂಧವನ್ನು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಗಮಕ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಕನ್ನಡ ಮತ್ತು ಸಂಸ್ಕೃತ ಕಾವ್ಯಗಳ ಗಮಕವಾಚನಕ್ಕೆ ವ್ಯಾಖ್ಯಾನ ಮಾಡಿದ್ದಾರೆ. ಮಂಡ್ಯ ಜಿಲ್ಲೆಯ ನಾಗಮಂಗಲದವರಾದ ಶಾಂತಾ, ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.